**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

**Karnataka State Road Transport Corporation**
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂಖ್ಯೆ: ಕರಾಸಾ/ಕೇಕ/ಆಡಳಿತ/ಎ3/768/2020-21 ದಿನಾಂಕ:24/02/2021

## : ಸುತ್ತೋಲೆ ಸಂಖ್ಯೆ: 1686 :

**ವಿಷಯ:** ವೈದ್ಯಕೀಯ ವೆಚ್ಚಗಳ ಮರುಪಾವತಿಗೆ ಸಿ.ಜಿ.ಹೆಚ್.ಎಸ್-2014 ರ ದರಪಟ್ಟಿಯನ್ನು ಅಳವಡಿಸಿಕೊಳ್ಳುವ ಬಗ್ಗೆ.

**ಉಲ್ಲೇಖ:** 1) ಡಿಪಿಎಆರ್ 2 ಎಸ್ ಎಂ.ಆರ್ 2009 ದಿನಾಂಕ: 24/10/2009.
2) ಸುತ್ತೋಲೆ ಸಂಖ್ಯೆ: 1602 ದಿನಾಂಕ: 24/09/2016.
3) ಸಂಖ್ಯೆ: ಟಿಡಿ 45 ಟಿ.ಸಿ.ಎಸ್. 2020 ದಿನಾಂಕ: 10/02/2021.

-----

ಪ್ರಸ್ತುತ ನಿಗಮದಲ್ಲಿ Karnataka Government Servants (Medical Attendance) Rules 1963, ಕ.ರಾ.ರ.ಸಾ.ಸಂಸ್ಥೆ ನೌಕರರ ವೈದ್ಯಕೀಯ ಚಿಕಿತ್ಸೆ ನಿಬಂಧನೆಗಳು 1970 ಹಾಗೂ ಪ್ರಚಲಿತ ಸರ್ಕಾರಿ ಆದೇಶಗಳನ್ವಯ ನೌಕರರು ಮತ್ತು ಅವರ ಅವಲಂಬಿತರಿಗೆ ನಿಗಮವು ಮಾನ್ಯತೆ ನೀಡಿದ ಆಸ್ಪತ್ರೆಗಳಲ್ಲಿ ಪಡೆದ ವೈದ್ಯಕೀಯ ಚಿಕಿತ್ಸಾ ವೆಚ್ಚವನ್ನು ಸಿ.ಜಿ.ಹೆಚ್.ಎಸ್-2014ರ Non-NABH ದರ ಪಟ್ಟಿಯಂತೆ ಉಲ್ಲೇಖ-2ರ ಸುತ್ತೋಲೆಯನ್ವಯ ಮರುಪಾವತಿ ಮಾಡಲಾಗುತ್ತಿದೆ.

ನಿಗಮದ ನೌಕರರಿಗೆ ಆರ್ಥಿಕವಾಗಿ ಹೆಚ್ಚಿನ ಅನುಕೂಲವಾಗುವಂತೆ ಸರ್ಕಾರವು ಉಲ್ಲೇಖ(3) ರ ಆದೇಶದಲ್ಲಿ ಸರ್ಕಾರಿ ನೌಕರರಿಗೆ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುತ್ತಿರುವ ಮಾದರಿಯಲ್ಲಿ ಸಿ.ಜಿ.ಹೆಚ್.ಎಸ್. ದರಗಳನ್ವಯ ಮರುಪಾವತಿ ಮಾಡಲು ಅನುಮೋದನೆ ನೀಡಿರುತ್ತದೆ. ಅದರಂತೆ ಈ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ.

**ಸರ್ಕಾರವು ಮಾನ್ಯತೆ ನೀಡಿರುವ ಎಲ್ಲಾ ಖಾಸಗಿ ಆಸ್ಪತ್ರೆಗಳ ಬಿಲ್ಲುಗಳನ್ನು ಅವುಗಳ ದರ್ಜೆಗೆ ಅನುಗುಣವಾಗಿ ಅಂದರೆ, NABH ದರ್ಜೆಯ ಖಾಸಗಿ ಆಸ್ಪತ್ರೆ ಆಗಿದ್ದಲ್ಲಿ ಸಿ.ಜಿ.ಹೆಚ್.ಎಸ್-2014 NABH ದರದಲ್ಲಿ ಮತ್ತು Non-NABH ದರ್ಜೆಯ ಆಸ್ಪತ್ರೆ ಆಗಿದ್ದಲ್ಲಿ ಸಿ.ಜಿ.ಹೆಚ್.ಎಸ್-2014 Non-NABH ದರದಲ್ಲಿ ವೈದ್ಯಕೀಯ ಚಿಕಿತ್ಸಾ ವೆಚ್ಚವನ್ನು ಮರುಪಾವತಿಸುವುದು. ಈ ಸೌಲಭ್ಯವು ದಿನಾಂಕ: 01-04-2021 ರಂದು ಹಾಗೂ ನಂತರದಲ್ಲಿ ಚಿಕಿತ್ಸೆ ಪಡೆದ ಪ್ರಕರಣಗಳಿಗೆ ಅನ್ವಯವಾಗಲಿದೆ.**

ಸರ್ಕಾರಿ ಹಾಗೂ ಸರ್ಕಾರದಿಂದ ಮಾನ್ಯತೆ ಹೊಂದದೇ ಇರುವ ಖಾಸಗಿ ಆಸ್ಪತ್ರೆಗಳಲ್ಲಿ ಅಥವಾ ಹೊರ ರಾಜ್ಯದ ಆಸ್ಪತ್ರೆಗಳಲ್ಲಿ ನೌಕರರು ಮತ್ತು ಅವರ ಅವಲಂಬಿತರುಗಳು ತುರ್ತು ಸಂದರ್ಭಗಳಲ್ಲಿ ಚಿಕಿತ್ಸೆ ಪಡೆದಲ್ಲಿ ಪ್ರಸ್ತುತ ಅನುಸರಿಸುತ್ತಿರುವ ನಿಯಮಗಳನ್ನು ಮತ್ತು ಮರುಪಾವತಿ ಕ್ರಮಗಳನ್ನು ಮುಂದುವರಿಸತಕ್ಕದ್ದು.

ಸಂಬಂಧಪಟ್ಟವರೆಲ್ಲರೂ ಮೇಲಿನ ಆದೇಶವನ್ನು ಗಮನದಲ್ಲಿಟ್ಟುಕೊಂಡು ಅದರಂತೆ ಸೂಕ್ತ ಕ್ರಮಕೈಗೊಳ್ಳತಕ್ಕದ್ದು.

(ಶಿವಯೋಗಿ ಸಿ. ಕಳಸದ, ಭಾ.ಆ.ಸೇ.,)
ವ್ಯವಸ್ಥಾಪಕ ನಿರ್ದೇಶಕರು

Scanned with CamScanner

<u>ಪ್ರತಿ ಮಾಹಿತಿಗಾಗಿ:</u>

1. ಅಧ್ಯಕ್ಷರು/ಉಪಾಧ್ಯಕ್ಷರು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಯವರಿಗೆ.
2. ವ್ಯವಸ್ಥಾಪಕ ನಿರ್ದೇಶಕರು, ಬೆಂ.ಮ.ಸಾ.ಸಂಸ್ಥೆ/ವಾ.ಕ.ರ.ಸಾ.ಸಂಸ್ಥೆ/ಈ.ಕ.ರ.ಸಾ.ಸಂಸ್ಥೆ ರವರಿಗೆ.
3. ನಿರ್ದೇಶಕರು(ಸಿ:ಪ)/ ನಿರ್ದೇಶಕರು(ಭ:ಜಾ), ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ.
4. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂ.ಮ.ಸಾ.ಸಂಸ್ಥೆ/ವಾ.ಕ.ರ.ಸಾ.ಸಂಸ್ಥೆ/ಈ.ಕ.ರ.ಸಾ.ಸಂಸ್ಥೆ ರವರಿಗೆ.

<u>ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>

5. ಎಲ್ಲಾ ಇಲಾಖಾ ಮುಖ್ಯಸ್ಥರುಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ.
6. ಎಲ್ಲಾ ಹಿರಿಯ ವಿ.ನಿ.,/ವಿಭಾಗೀಯ ನಿಯಂತ್ರಣಾಧಿಕಾರಿ/ಕಾರ್ಯ ವ್ಯವಸ್ಥಾಪಕರು, ಪ್ರಾದೇಶಿಕ ಕಾರ್ಯಾಗಾರ/ ಪ್ರಾಂಶುಪಾಲರು, ತರಬೇತಿ ಕೇಂದ್ರಗಳು, ಕ.ರಾ.ರ.ಸಾ.ನಿಗಮ ರವರುಗಳಿಗೆ.
7. ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ.
8. ಮುಖ್ಯ ಭದ್ರತಾ ಮತ್ತು ಜಾಗ್ರತಾಧಿಕಾರಿ, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸದರಿ ಸುತ್ತೋಲೆಯನ್ನು ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಿ, ಪ್ರದರ್ಶಿತಗೊಂಡ ಬಗ್ಗೆ ಈ ಕಛೇರಿಗೆ ತಪ್ಪದೆ ವರದಿ ಸಲ್ಲಿಸುವುದು.
9. ಮುಖ್ಯ ಗಣಕ ವ್ಯವಸ್ಥಾಪಕರು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸದರಿ ಸುತ್ತೋಲೆಯನ್ನು ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ, ಪ್ರಕಟಿಸಿರುವ ಬಗ್ಗೆ ಈ ಕಛೇರಿಗೆ ಮಾಹಿತಿಯನ್ನು ತಪ್ಪದೆ ಕಳುಹಿಸುವುದು.
10. ಪ್ರಧಾನ ಕಛೇರಿ ಪತ್ರ ಕಡತ.

Scanned with CamScanner